**ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್–76ರಲ್ಲಿ ದಿನಾಂಕ: 09–03–2022 ರಂದು ನಡೆದ ವಾರ್ಡ್ ಸಮಿತಿ ಸಭೆಯ**

## *ಸಭಾ ನಡವಳಿಗಳು.*

**ವಾರ್ಡ್ ಸಂಖ್ಯೆ–76 ಗಾಯತ್ರಿನಗರ** **ಸಮಯ: ಬೆಳಗ್ಗೆ : 11:00 ಘಂಟೆಗೆ**

ದಿನಾಂಕ: 09–03–2022 ರಂದು ವಾರ್ಡ್ ಸಂಖ್ಯೆ: 76ರ ಮಾರ್ಚ್ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು, ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್–76 ಗಾಯತ್ರಿನಗರ |
| 2 | ಶ್ರೀ ಸತೀಶ್‌ಕುಮಾರ್.ಬಿ, ಸಹಾಯಕ ಅಭಿಯಂತರರು, ವಾರ್ಡ್–76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ರಾಮಕೃಷ್ಣಯ್ಯ, ಕಂದಾಯ ಪರಿವೀಕ್ಷಕರು |
| 4 | ಶ್ರೀಮತಿ ಶಾರದ, ಹಿರಿಯ ಆರೋಗ್ಯ ಪರಿವೀಕ್ಷಕರು |
| 5 | ಎನ್ ರವಿಕುಮಾರ್, ಮೌಲ್ಯಮಾಪಕರು |
| 6 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 7 | ಅಲೀನ್ ಜಮತ್, ಆರೋಗ್ಯ ಅಧಿಕಾರಿ |
| 8 | ಪ್ರಿಯ ಸ್ಟಾಫ್ ನರ್ಸ್ |
| 9 | ಶಿಲ್ಪ.ಎಸ್, ಕಿರಿಯ ಆರೋಗ್ಯ ಪರಿವೀಕ್ಷಕರು |
| 10 | ಹೆಚ್ ರಮೇಶ್, ಕಿರಿಯ ಅಭಿಯಂತರರು |
| 11 | ಪವನ್‌ಕುಮಾರ್, ಬಿಡಬ್ಲ್ಯೂಎಸ್‌ಎಸ್‌ಬಿ |
| 12 | ಸಿದ್ದರಾಜು, ಬಿಡಬ್ಲ್ಯೂಎಸ್‌ಎಸ್‌ಬಿ |
| 13 | ಪಾಷಾ, ಕಿರಿಯ ಅಭಿಯಂತರರು (ವಿದ್ಯುತ್) |
| 14 | ಬಿ.ಸಿ ರಂಗನಾಥ್ ಬೆಸ್ಕಾಂ |
| 15 | ಕೆ. ಗೋವಿಂದರಾಜು, ಸ್ಯಾನಿಟರಿ ದಫೇದಾರ್ |
| 16 | ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |
| 17 | ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 18 | ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್–76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಕಂದಾಯ ಇಲಾಖೆ :**

- ಕಳೆದ 3 ವರ್ಷಗಳಿಂದ ಕಂದಾಯ ಪಾವತಿಸದೇ ಇರುವ ಹಳೆ defaulterಗಳಿಂದ ಕಂದಾಯವನ್ನು ವಸೂಲಿ ಮಾಡಲು ಕ್ರಮಕೈಗೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. ಖಾಲಿ ನಿವೇಶನಗಳಿಗೆ 3 ನೋಟೀಸ್ ನೀಡಲು ಸೂಚಿಸಿರುತ್ತಾರೆ. 2ನೇ ಅಡ್ಡರಸ್ತೆಯಲ್ಲಿ ಬೆಂಕಿ ಹಾಕುತ್ತಲಿದ್ದು ಇದನ್ನು ತಡೆಯಲು ಸೂಚಿಸಿರುತ್ತಾರೆ. ಅಂಭಾ ಭವಾನಿ ದೇವಸ್ಥಾನದ ಪಕ್ಕದಲ್ಲಿರುವ ಖಾಲಿ ನಿವೇಶನದ ಬಗ್ಗೆ ಕ್ರಮಕೈಗೊಳ್ಳಲು ತೀರ್ಮಾನಿಸಲಾಯಿತು. ಅತೀ ಹೆಚ್ಚು ತೆರಿಗೆ ಪಾವತಿಸದ (ಉದಾ: ಕರ್ನಾಟಕ ಬ್ಯಾಂಕ್) Priority ಮೇಲೆ ತೆರಿಗೆ ವಸೂಲಿಗೆ ಕ್ರಮಕೈಗೊಳ್ಳಲು ನಿರ್ಧರಿಸಲಾಯಿತು.

**BWSSB ಇಲಾಖೆ:**

- ಡಿ ಬ್ಲಾಕ್ 4ನೇ ಮುಖ್ಯರಸ್ತೆಯಲ್ಲಿ Restoration ಕಾಮಗಾರಿಯನ್ನು ಕೈಗೊಳ್ಳಲು ನಿರ್ಧರಿಸಲಾಯಿತು. ರಸ್ತೆ ಅಗೆತ ಮಾಡಿದ ಕಡೆ Restoration ಗಾಗಿ Provision ಮಾಡಿಕೊಳ್ಳಲಾಯಿತು. **BWSSB** ನವರು ರಸ್ತೆ ಅಗೆತ ಮಾಡುವ ರಸ್ತೆಗಳನ್ನು Provision ಮಾಡಿಕೊಳ್ಳಲು ಸೂಚಿಸಲಾಯಿತು. ಕುಡಿಯುವ ನೀರಿನ ಲೀಕೇಜ್‌ಗಳನ್ನು ಮುಂದಿನ ಸಭೆಯೊಳಗೆ ಸರಿಪಡಿಸಲು ತಿಳಿಸಲಾಯಿತು. **Conservancy** ಗಳಲ್ಲಿ ಸ್ವಚ್ಛತೆಗಾಗಿ ಪಾಲಿಕೆಯ ಆರೋಗ್ಯ ಇಲಾಖೆಯೊಂದಿಗೆ ಸೇರಿ ಸಾವಜನಿಕರಿಗೆ ಜಾಗೃತಿ ಮೂಡಿಸಲು ತಿಳಿಸಲಾಯಿತು.

**ಆರೋಗ್ಯ ಇಲಾಖೆ :** ([illegible])

- ವಾರ್ಡ್‌ನಲ್ಲಿ ಸ್ವಚ್ಛತೆಗಾಗಿ ಪೌರಕಾರ್ಮಿಕರು ಬೇಕಾಗಿದ್ದು, ಇದಕ್ಕಾಗಿ ಕೇಂದ್ರ ಕಛೇರಿಯಿಂದ ರಿ–ಮ್ಯಾಪಿಂಗ್ ಮಾಡಲು ಬರುತ್ತಾರೆಂದು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು. Vulnerable Points ಉದಾರಣೆಗೆ **Conservancy** ಗಳು, ರೈಲ್ವೆ ಸಮಾಂತರ ರಸ್ತೆ ಹಾಗೂ ಮಾರುಕಟ್ಟೆ ಪ್ರದೇಶಗಳನ್ನು ಹೆಚ್ಚುವತ್ತು ನೀಡಿ ಸ್ವಚ್ಛಗೊಳಿಸಬೇಕೆಂದು ನೋಡಲ್ ಅಧಿಕಾರಿಗಳು ಸೂಚಿಸಿದರು. ಒಣ ಕಸ ಹಸಿ ಕಸ ವಿಂಗಡಣೆ ಶೇ.45ರಷ್ಟು ನಡೆಯುತ್ತಿದೆ ಎಂದು ಕಿ.ಆ.ಪರಿವೀಕ್ಷಕರು ತಿಳಿಸಿದರು. ಕಾಮಗಾರಿ ವಿಭಾಗದ ಟ್ರಾಕ್ಟರ್ ಉಪಯೋಗಿಸಿಕೊಂಡು intensive cleaning ಕಾರ್ಯಕ್ರಮ ಹಮ್ಮಿಕೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬಿಬಿಎಂಪಿ ವಿದ್ಯುತ್ ದೀಪಗಳ ವಿಭಾಗ**

- ಹರಿಶ್ಚಂದ್ರ ಚಿತಾಗಾರದ ಗೇಟ್ ಬಳಿ ಸಿಸಿಟಿವಿ ಅಳವಡಿಸಲು ಹಾಗೂ ಚಿತಾಗಾರದ ಒಳಗೆ ಹೊರಗಡೆಯಿಂದ ಮಣ್ಣು ಹಾಗೂ ಡೆಬ್ರಿಸ್ ಅನ್ನು ಹಾಕಲು ಬರುವ ಟ್ರಾಕ್ಟರ್‌ಗಳನ್ನು ತಡೆಯಲು ಚಿತಾಗಾರದಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಸೂಚನೆ ನೀಡಲು ನಿರ್ಧರಿಸಲಾಯಿತು. ವಿದ್ಯುತ್ ದೀಪಗಳ ನಿರ್ವಹಣೆಗಾಗಿ ಹೊಸ ಗುತ್ತಿಗೆದಾರರು ಬಂದಿದ್ದು, ಅವರಿಂದ ಎಲ್ಲಾ ದೂರುಗಳನ್ನು ಬಗೆಹರಿಸುವುದಾಗಿ ಪಾಲಿಕೆಯ ವಿದ್ಯುತ್ ವಿಭಾಗ ಇಂಜಿನಿಯರ್ ತಿಳಿಸಿದರು.

**ಮಾರ್ಷಲ್‌ರವರು:**

- ಸಭೆಗೆ ಹಾಜರಿಲ್ಲದ ಕಾರಣ ಮುಂದಿನ ಸಭೆಗೆ ಹಾಜರಾಗಲು ಸೂಚನೆ ನೀಡಲು ನೋಡಲ್ ಅಧಿಕಾರಿಗಳು ಸೂಚಿಸಿದರು.

**ಆರೋಗ್ಯ ಇಲಾಖೆ ([illegible]):**

- ಕೋವಿಡ್ ಲಸಿಕೆ 1ನೇ ಡೋಸ್ ಶೇ.97% ಹಾಗೂ 2ನೇ ಡೋಸ್ ಶೇ.82% ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದರು. ಸಂಜೆ ಪಾಲಿಕೆಯಲ್ಲಿ ಇಬ್ಬರು ಕೋವಿಡ್ ವೈದ್ಯರು. ಕಾರ್ಯನಿರ್ವಹಿಸುತ್ತಿದ್ದು, ಇವರನ್ನು ಮುಂದುವರೆಸಲು ಹಾಗೂ ಬಯೋಮೇಟ್ರಿಕ್ ಹಾಜರಾತಿ ಅಳವಡಿಸಲು ನಿರ್ಧರಿಸಲಾಯಿತು. ಆರೋಗ್ಯ ಕೇಂದ್ರದಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಧೂಳು ಉಂಟಾಗುತ್ತಿದ್ದು, ಇದ್ದರಿಂದ ಅಲ್ಲಿಗೆ ಬರುವ ರೋಗಿಗಳಿಗೆ ತೊಂದರೆಯುಂಟಾಗುತ್ತಿದ್ದು, ಅದನ್ನು ತಡೆಯಲು ನೋಡಲ್ ಅಧಿಕಾರಿಗಳು ಸೂಚಿಸಿದರು.

- ಪಲ್ಸ್ ಪೋಲಿಯೊ ಲಸಿಕೆ ಕಾರ್ಯಕ್ರಮ ಮನೆ ಮನೆಗೆ ತೆರಳಿ ನಡೆಯುತ್ತಲಿರುತ್ತದೆ. ಹಾಗೂ ಕೋವಿಡ್ ಲಸಿಕೆ ಕಾರ್ಯಕ್ರಮ ನಡೆಯುತ್ತಲಿರುತ್ತದೆ. ಹಾಗೂ ಕೋವಿಡ್ ಪರೀಕ್ಷೆ ದಿನಕ್ಕೆ 50 ಜನರಿಗೆ ನಡೆಯುತ್ತಲಿರುತ್ತದೆ. ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದರು.

**ಪಶುಸಂಗೋಪನೆ:**

- ಕೋಳಿ ಕಸ ಹಾಗೂ ಮಟನ್ ವೇಸ್ಟ್ ತೆರವಿಗೆ ಕ್ರಮಕೈಗೊಂಡಿರುವ ಬಗ್ಗೆ ವಿವರಗಳೊಂದಿಗೆ ಮುಂದಿನ ಸಭೆಗೆ ಹಾಜರಾಗಲುಪತ್ರ ಬರೆಯಲು ನೋಡಲ್ ಅಧಿಕಾರಿಗಳು ಸೂಚಿಸಿದರು.

**ಬೆಸ್ಕಾಂ:**

- ಅರಣ್ಯ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ನಂತರ ಮರದ ರೆಂಬೆಗಳ ಟ್ರಿಮಿಂಗ್ ಕ್ರಮ ಕೈಗೊಳ್ಳಲು ಹಾಗೂ ಪಾಲಿಕೆಯ ಅರಣ್ಯ ಇಲಾಖೆಯು ಈ ಬಗ್ಗೆ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸೂಚಿಸಿದರು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಕಾರ್ಯದರ್ಶಿ, | ಅಧ್ಯಕ್ಷರು |
| ಸಹಾಯಕ ಅಭಿಯಂತರರು, ವಾರ್ಡ್-76 | ನೋಡಲ್ ಅಧಿಕಾರಿಗಳು, ವಾರ್ಡ್-76 |
| ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ | ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ |